ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ 6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 45 ॥ Udp/1263/2015-17 ॥ R.NO.50495/91 ॥ ತಾರೀಕು : 28–11–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಕೊಂಕಣಿ ಖಾರ್ವಿ ಭವನ ಉದ್ಘಾಟನೆ



ಕುಂದಾಪುರದ ತ್ರಾಸಿಯಲ್ಲಿ ಅಖಿಲ ಭಾರತ ಕೊಂಕಣಿ ಖಾರ್ವಿ ಮಹಾಜನ ಸಭಾದ ವತಿಯಿಂದ ಸುಮಾರು 10 ಕೋ. ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಕೊಂಕಣಿ ಖಾರ್ವಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಭವನ ಕೊಂಕಣ ಖಾರ್ವಿ ಭವನವನ್ನು ಕೇಂದ್ರ ಸಚಿವ ಸದಾನಂದ ಗೌಡ ಉದ್ಘಾಟಿಸಿದರು. "ಕೊಂಕಣಿ ಖಾರ್ವಿ ಸಮಾಜದ ಸಮಸ್ಯೆಗಳ ಬಗ್ಗೆ ಅರಿವಿದ್ದು ಸಮಸ್ಯೆಗಳನ್ನು ಬಗೆಹರಿಸಲು ಒಟ್ಟಾಗಿ ಪ್ರಯತ್ನಿಸಬೇಕು. ತಾವು ಸಿಎಂ ಆಗಿದ್ದಾಗ ಹಿಂದುಳಿದ ಸಮಾಜದ ಅಭಿವೃದ್ಧಿಗೆ 100 ಕೋ.ರೂ. ಅನುದಾನ ಒದಗಿಸಲಾಗಿತ್ತು. ಕೊಂಕಣಿ ಖಾರ್ವಿ ಸಮಾಜ ಭವನಕ್ಕೆ 1 ಕೋ.ರೂ. ನೀಡಲಾಗಿದೆ" ಎಂದರು.

ಸಮುದ್ರವೇ ನಂಬಿ ಜೀವನ ನಡೆಸುವ ಕೊಂಕಣಿ ಖಾರ್ವಿಗಳು ವೀರರು. ಹಿಂದುಳಿದವರು ಎನ್ನುವ ಚಿಂತೆ ತೊಡೆದು ಹಾಕಿ ಮುಂದುವರಿದವರೆನ್ನುವ ಮನೋಭಾವ ಬೆಳೆಸಿಕೊಳ್ಳಿ. ಇನ್ನೈದು ವರ್ಷದೊಳಗೆ ಬಡತನವೇ ಇರಬಾರದು. ಈ ಸಮಾಜದ ಅಭಿವೃದ್ಧಿಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಮಣಿಪಾಲ ಗ್ಲೋಬಲ್ ಎಜುಕೇಶನ್ ಚೇರ್‌ಮೆನ್ ಟಿ.ವಿ. ಮೋಹನದಾಸ ಪೈ ಹೇಳಿದರು.

**ಮಾಸಿಕ ಪಿಂಚಣಿ :**

ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್‌ನ ಪ್ರವರ್ತಕ ಡಾ| ಜಿ.ಶಂಕರ್ ಮಾತನಾಡಿ, 60 ವರ್ಷ ದಾಟಿದ ಮೀನುಗಾರರಿಗೆ ಕನಿಷ್ಠ 2000 ರೂ ಮಾಸಿಕ ಪಿಂಚಣಿ ನೀಡಬೇಕು ಎಂದು ಸರಕಾರವನ್ನು ಒತ್ತಾಯಿಸಿದರು.

ಕೊಂಕಣಿ ಖಾರ್ವಿ ಸಮೀಕ್ಷೆ ಸಂಚಿಕೆಯನ್ನು ಸಚಿವ ಪ್ರಮೋದ್ ಮಧ್ವರಾಜ್ ಬಿಡುಗಡೆ ಮಾಡಿದರು. ಅಖಿಲ ಭಾರತ ಕೊಂಕಣಿ ಖಾರ್ವಿ ಮಹಾಜನ ಸಭಾದ ಅಧ್ಯಕ್ಷ ಕೆ.ಬಿ. ಖಾರ್ವಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ, ಶಾಸಕರಾದ ಕೆ.ಗೋಪಾಲ ಪೂಜಾರಿ, ಹಾಲಾಡಿ ಶ್ರೀನಿವಾಸ ಶೆಟ್ಟಿ , ಮಾಂಕಳ ಸುಬ್ಬ ವೈದ್ಯ, ಸತೀಶ ಸೈಲ್, ಮೀನುಗಾರಿಕಾ ಫೆಡರೇಶನ್ ಅಧ್ಯಕ್ಷ ಯಶಪಾಲ್ ಸುವರ್ಣ, ಸಿಂಡಿಕೇಟ್ ಬ್ಯಾಂಕಿನ ಉಡುಪಿ ವಲಯದ ಜ.ಮ್ಯಾನೇಜರ್ ಸತೀಶ್ ಕಾಮತ್ , ವಿಶ್ವಕೊಂಕಣಿ ಕೇಂದ್ರದ ಅಧ್ಯಕ್ಷ ಬಸ್ತಿ ವಾಮನ ಶೆಣೈ, ಗ್ರಾ.ಪಂ. ಅಧ್ಯಕ್ಷರಾದ ಚಂದ್ರಶೇಖರ ಪೂಜಾರಿ, ವೆಂಕಟ ಪೂಜಾರಿ, ಪ್ರದೀಪ ಜಿ. ಪೈ, ರವಿ ಟಿ.ನಾಯ್ಕ್ ವೇದಿಕೆಯಲ್ಲಿದ್ದರು. ಕೇಂದ್ರ ಸಚಿವ ಸದಾನಂದ ಗೌಡ ಹಾಗೂ ಮೋಹನದಾಸ್ ಪೈ, ಡಾ| ರವೀಂದ್ರ ರಾವ್‌ರವರನ್ನು ಸಮ್ಮಾನಿಸಲಾಯಿತು.

## ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಬಿ ಅಪ್ಪಣ ಹೆಗ್ಡೆ



ಕುಂದಾಪುರ ತಾಲ್ಲೂಕು 16ನೇ ಕನ್ನಡ ಸಾಹಿತ್ಯ ಸಮ್ಮೇಳನ ಡಿಸೆಂಬರ್ 16, 17 ರಂದು ಎರಡು ದಿನ ಹಕ್ಲಾಡಿಯ ಕೆಎಸ್‌ಎಸ್ ಸರಕಾರಿ ಪ್ರೌಢಶಾಲಾ ಆವರಣದಲ್ಲಿ ನಡೆಯಲಿದೆ. ಸಮ್ಮೇಳನದ ಅಧ್ಯಕ್ಷರಾಗಿ ಹಿರಿಯ ಸಾಂಸ್ಕೃತಿಕ ನೇತಾರ ಬಿ. ಅಪ್ಪಣ್ಣ ಹೆಗ್ಡೆಯವರನ್ನು ಆಯ್ಕೆ ಮಾಡಲಾಗಿದೆ.

ಅಪರಾಹ್ನ 3 ರಿಂದ ರಾತ್ರಿ 9 ಗಂಟೆ ತನಕ ನಡೆಯುವ ಸಮ್ಮೇಳನದಲ್ಲಿ ವಿವಿಧ ಗೋಷ್ಠಿಗಳು ಸಾಹಿತ್ಯ ಚಟುವಟಿಕೆಗಳು ನಡೆಯಲಿವೆ.

ಬಿ.ಅಪ್ಪಣ್ಣ ಹೆಗ್ಡೆ ಕುಂದಾಪುರ ತಾಲ್ಲೂಕಿನ ಹಿರಿಯ ಸಾಮಾಜಿಕ ಧುರೀಣರಲ್ಲಿ ಓರ್ವರಾಗಿದ್ದು ಸಾಹಿತ್ಯ, ಜಾನಪದ , ಧಾರ್ಮಿಕ, ಕೃಷಿ ಸೇವಾ ಚಟುವಟಿಕೆಗಳಲ್ಲಿ ಕಳೆದ ಆರು ದಶಕಗಳಿಂದ ಕ್ರಿಯಾಶೀಲರಾಗಿದ್ದು ಶಿಕ್ಷಣ ಸಂಸ್ಥೆಗಳ ಸಂಚಾಲಕರಾಗಿಯೂ ಜವಾಬ್ದಾರಿ ನಿರ್ವಹಿಸುತ್ತಿರುವ ತಜ್ಞರು. "ಕುಂದಪ್ರಭ"ದಲ್ಲಿ ಅವರು ಬರೆಯುತ್ತಿದ್ದ ಸರಣಿ ಅಂಕಣ ಜನಪ್ರಿಯವಾಗಿತ್ತು. ಇವರ ಜೀವನದ ಹೆಜ್ಜೆಗಳ ಕುರಿತು ಪುಸ್ತಕವೂ ಪ್ರಕಟವಾಗಿದೆ. ಕುಂದಾಪುರ ತಾಲ್ಲೂಕಿನ ಹಲವಾರು ಕಿರಿಯ ಬರಹಗಾರರಿಗೆ ಸ್ಫೂರ್ತಿ ತುಂಬಿದ ಹಿರಿಮೆ ಇವರದು.

ಕುಂದಕನ್ನಡದಲ್ಲಿ ಸ್ಫುಟವಾಗಿ ಮಾತನಾಡ ಬಲ್ಲ ಅಪ್ಪಣ್ಣ ಹೆಗ್ಡೆ, ಕುಂದಾಪ್ರ ಭಾಷೆಯನ್ನು ಮೂಲ ಸೊಗಡಿನಲ್ಲೇ ಉಳಿಸಿಕೊಳ್ಳಲು ಕುಂದಾಪುರದವರು ಕಾಳಜಿ ವಹಿಸಬೇಕು ಎಂದು ಕರೆ ನೀಡಿದ ಕುಂದಾಪುರದ ಸಾಂಸ್ಕೃತಿಕ ರಾಯಭಾರಿ.

ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜನಜಾಗೃತಿ ವೇದಿಕೆ ಮೂಲಕ ಸಾಮಾಜಿಕ ಪಿಡುಗು ನಿವಾರಿಸುವ ಪ್ರಯತ್ನ ನಡೆಸುತ್ತಿರುವವರು. ಬಿ. ಅಪ್ಪಣ ಹೆಗ್ಡೆ ಟ್ರಸ್ಟ್ ಬಡ ವಿದ್ಯಾರ್ಥಿಗಳ ಅಭ್ಯುದಯಕ್ಕೆ ಅನೇಕ ಕಾರ್ಯಕ್ರಮ ನಡೆಸುತ್ತಿದೆ.

## ಕುಂದಾಪುರಕ್ಕೆ, ಮಂಗಳೂರು ಕೆಎಂಸಿ ಆಸ್ಪತ್ರೆ ಸೌಲಭ್ಯ

ಮಂಗಳೂರು ಕೆಎಂಸಿ ಆಸ್ಪತ್ರೆಯ ವತಿಯಿಂದ ಕುಂದಾಪುರ ತಾಲ್ಲೂಕಿನ ಜನರಿಗೆ ಅನುಕೂಲವಾಗುವ ಹಲವು ಸೌಲಭ್ಯಗಳನ್ನು ರೂಪಿಸಲಾಗಿದೆ. ಕುಂದಾಪುರದ ಕೆನರಾಬ್ಯಾಂಕ್ ಎದುರುಗಡೆ ಇರುವ ಶ್ರೀ ಸುಧೀಂದ್ರ ಕಾಂಪ್ಲೆಕ್ಸ್‌ನ ಮಾಹಿತಿ ಕೇಂದ್ರದಲ್ಲಿ ಪ್ರತಿದಿನ ರಕ್ತ ಪರೀಕ್ಷೆ ನಡೆಸಲು ರಕ್ತ ಸಂಗ್ರಹ ವ್ಯವಸ್ಥೆ ಮಾಡಲಾಗುತ್ತದೆ. ಎಲ್ಲ ವಿಧದ ರಕ್ತ ತಪಾಸಣೆ ಕೆಎಂಸಿಯಲ್ಲಿ ನಡೆಸಿ ವರದಿ ನೀಡಲಾಗುತ್ತದೆ. ಮಣಿಪಾಲದ ಆರೋಗ್ಯ ಕಾರ್ಡ್ ಹೊಂದಿದವರಿಗೆ ರಿಯಾಯಿತಿ ಇದೆ. ಡಿಸೆಂಬರ್ ತಿಂಗಳಲ್ಲಿ ತಜ್ಞ ವೈದ್ಯರೇ ಕುಂದಾಪುರಕ್ಕೆ ಆಗಮಿಸಲಿದ್ದು ಡಿಸೆಂಬರ್ 4, 7 ಹಾಗೂ 8 ಹಾಗೂ 10ರಂದು ಕುಂದಾಪುರಕ್ಕೆ ಇದೇ ಸ್ಥಳದಲ್ಲಿ ಮಧ್ಯಾಹ್ನ 3 ಗಂಟೆಗೆ ಮೂತ್ರ , ಮಧುಮೇಹ , ಹಾರ್ಮೋನ್, ನರಸಂಬಂಧಿ ಸಮಸ್ಯೆಗಳಿಗೆ ಸಾರ್ವಜನಿಕರು ಭೇಟಿ ನೀಡಬಹುದು. ಈ ಮಾಹಿತಿ ಕೇಂದ್ರದ ಮೂಲಕ ಕೆ.ಎಂ.ಸಿ. ಆಸ್ಪತ್ರೆಯ ವಿವಿಧ ಸೌಲಭ್ಯಗಳನ್ನು ಪಡೆಯುವ ಅವಕಾಶವಿದೆ.

Good News for Science students of
Kundapura..
7th ANNIVERSARY
JEE / NEET 2 YEAR REGULAR COACHING
for Just 10000/-* per year
*including study materials worth 3000/-
Extra 10% discount for Govt PU students and students who have scored above 95% in SSLC
Offer valid till 31st August only. (30 Seats only)
Saraswathi Group Of Institutes
SARASWATHI COACHING CENTER
287/1, SRI GANESH PRASAD, NEAR BEO OFFICE
WEST BLOCK ROAD, KUNDAPURA
Ph: 9141138705/9916034605

Consultation with Specialist Doctors from KMC Hospital at Kundapur

| Date | Department | Time |
|---|---|---|
| 4th Dec | Urology | 3:00 pm |
| 7th Dec | Endocrinology | 3:00 pm |
| 8th Dec | Gastroenterology | 3:00 pm |

Facilities offered at Information Centre
- 24x7 helpline for Emergency & Ambulance Services.
- Health check package booking
- Lab Sample Collection
- Specialist Consultations
- Appointment Services at KMC Hospital, Mangaluru

KMC Hospital Information Centre
Shree Sudhindra Complex, Opposite Canara Bank- Kundapura
For More Details Contact :
9663372919
KMC Hospital
MANGALURU
INFORMATION CENTRE